**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ: ಬೆಂಗಳೂರು-560 027**

ಸಂ:ಕರಾಸಾ:ಕೇಕ:ಸಂ:ಸಿ2: 1507/1156 :2020-21 ದಿನಾಂಕ: 13.11.2020

**ಸುತ್ತೋಲೆ ಸಂಖ್ಯೆ: 1579/2020**

ವಿಷಯ : 2020-21 ನೇ ಸಾಲಿಗೆ ವಿದ್ಯಾರ್ಥಿ ಬಸ್ ಪಾಸುಗಳನ್ನು ವಿತರಿಸುವ ಬಗ್ಗೆ.

ಉಲ್ಲೇಖ : 1) ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:464/1999, ದಿನಾಂಕ: 17.05.1999,
2) ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ 480/2000 ದಿನಾಂಕ 26.05.2000.
3) ಸುತ್ತೋಲೆ ಸಂಖ್ಯೆ : 789 ದಿನಾಂಕ 20.08.2000.
4) ಸುತ್ತೋಲೆ ಸಂಖ್ಯೆ : 924 ದಿನಾಂಕ 03.08.2007.
5) ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 615/2008 ದಿನಾಂಕ 03.10.2008.
6) ಸುತ್ತೋಲೆ ಸಂಖ್ಯೆ : 1006/2009 ದಿನಾಂಕ 29.08.2009.
7) ಸುತ್ತೋಲೆ ಸಂಖ್ಯೆ : 1121/2012 ದಿನಾಂಕ 11.05.2012.
8) ಸುತ್ತೋಲೆ ಸಂಖ್ಯೆ: 1226/2014 ದಿನಾಂಕ 30.05.2014.
9) ಸುತ್ತೋಲೆ ಸಂಖ್ಯೆ : 1333/2016 ದಿನಾಂಕ 24.05.2016
10) ಸುತ್ತೋಲೆ ಸಂಖ್ಯೆ : 1378 /2017 ದಿನಾಂಕ 29.05.2017.
11) ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ : 786 / 2017 ದಿನಾಂಕ 07.06.2017.
12) ಸುತ್ತೋಲೆ ಸಂಖ್ಯೆ : 1435/2018 ದಿನಾಂಕ 04.06.2018.
13) ಸರ್ಕಾರದ ಆದೇಶ ಸಂಖ್ಯೆ : ಸಾರಿಇ 14 ಸಾಸಂಬಿ 2019 ದಿನಾಂಕ 06.06.2019.
14) ಸುತ್ತೋಲೆ ಸಂಖ್ಯೆ: 1495/2019 ದಿನಾಂಕ 14.06.2019.
15) ಸುತ್ತೋಲೆ ಸಂಖ್ಯೆ: 1496/2019 ದಿನಾಂಕ 17.06.2019.

** ** **

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, ಹಿಂದಿನ ವರ್ಷಗಳಂತೆ 2020-21 ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಬಸ್ ಪಾಸುಗಳನ್ನು ವಿತರಿಸಲಿದ್ದು, ಈ ವಿಷಯದಲ್ಲಿ ಕೆಳಕಂಡ ನಿರ್ದೇಶನಗಳನ್ನು ಅನುಸರಿಸಲು ಆದೇಶಿಸಿದೆ.

2020-21 ನೇ ಸಾಲಿಗೆ ವಿದ್ಯಾರ್ಥಿ ಪಾಸು ದರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಪಾಸುಗಳ ವಿಧ | ಅವಧಿ | ಪಾಸಿನ ದರ (ರೂ) | | ಪಾಸಿನ ಒಟ್ಟು ದರ ( ರೂ ) (ಸಂಸ್ಕರಣಾ ಶುಲ್ಕ ಹಾಗೂ ಅ.ಪ.ನಿ ಸೇರಿದಂತೆ) | |
|---|---|---|---|---|---|---|
| | | | ಸಾಮಾನ್ಯ ವಿದ್ಯಾರ್ಥಿಗಳಿಗೆ | ಪ. ಜಾ ಹಾಗೂ ಪ. ಪಂವಿದ್ಯಾರ್ಥಿಗಳಿಗೆ | ಸಾಮಾನ್ಯ ವಿದ್ಯಾರ್ಥಿಗಳಿಗೆ | ಪ. ಜಾ ಹಾಗೂ ಪ. ಪಂವಿದ್ಯಾರ್ಥಿಗಳಿಗೆ |
| 1 | ಪ್ರಾಥಮಿಕ ಶಾಲೆ | 10 ತಿಂಗಳು | ಉಚಿತ | ಉಚಿತ | 150 | 150 |
| 2 | ಪ್ರೌಢಶಾಲೆ ಬಾಲಕರು | 10 ತಿಂಗಳು | 600 | ಉಚಿತ | 750 | 150 |
| 3 | ಪ್ರೌಢಶಾಲೆ ಬಾಲಕಿಯರು | 10 ತಿಂಗಳು | 400 | ಉಚಿತ | 550 | 150 |
| 4 | ಪಿಯುಸಿ / ಪದವಿ / ಡಿಪ್ಲೋಮೋ | 10 ತಿಂಗಳು | 900 | ಉಚಿತ | 1050 | 150 |
| 5 | ಐ.ಟಿ.ಐ | 12 ತಿಂಗಳು | 1150 | ಉಚಿತ | 1310 | 160 |
| 6 | ವೃತ್ತಿಪರ ಕೋರ್ಸುಗಳ | 10 ತಿಂಗಳು | 1400 | ಉಚಿತ | 1550 | 150 |
| 7 | ಸಂಜೆ ಕಾಲೇಜು/ಪಿ.ಹೆಚ್.ಡಿ | 10 ತಿಂಗಳು | 1200 | ಉಚಿತ | 1350 | 150 |

1. ಸಂಸ್ಕರಣಾ ಶುಲ್ಕವಾಗಿ ರೂ.100/- ಪಡೆಯುವುದನ್ನು ಮುಂದುವರೆಸಲಾಗಿದೆ.
2. ಅಪಘಾತ ಪರಿಹಾರ ನಿಧಿ ವಂತಿಕೆ ಮಾಸಿಕ ರೂ.5/-ರಂತೆ, 10 ತಿಂಗಳಿಗೆ ರೂ.50/- ಮತ್ತು 12 ತಿಂಗಳಿಗೆ ರೂ.60/- ಪಡೆಯುವುದನ್ನು ಮುಂದುವರೆಸಲಾಗಿದೆ.
3. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುವ ವ್ಯವಸ್ಥೆಯನ್ನು ಮುಂದುವರೆಸಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಸಂಸ್ಕರಣಾ ಶುಲ್ಕ ಮತ್ತು ಅಪಘಾತ ಪರಿಹಾರ ನಿಧಿ ಶುಲ್ಕ ಮಾತ್ರ ಪಡೆಯುವುದು.
4. ಹಿಂದಿನ ವರ್ಷಗಳ ರೂಢಿಯಂತೆ ಶಾಲೆ / ಕಾಲೇಜುಗಳ ಮುಖಾಂತರ ವಿದ್ಯಾರ್ಥಿಗಳಿಗೆ ಪಾಸುಗಳನ್ನು ವಿತರಿಸುವುದು.

## I. ವಿದ್ಯಾರ್ಥಿಗಳು ಪಾಸ್‌ಗಾಗಿ ಅರ್ಜಿ ಸಲ್ಲಿಸುವಿಕೆ:

### ಎ. ಆನ್‌ಲೈನ್ (ಸೇವಾಸಿಂಧು ಪೋರ್ಟಲ್ ಮುಖಾಂತರ):

1. ಪ್ರಸಕ್ತ ಸಾಲಿನಿಂದ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಸರ್ಕಾರ ನಿಗದಿಪಡಿಸಿರುವ ಸೇವಾಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
2. ವಿದ್ಯಾಥಿಗಳು ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಅರ್ಜಿಗೆ ಶಾಲಾ / ಕಾಲೇಜುಗಳ ಮುಖ್ಯಸ್ಥರಿಂದ ರುಜುಗೊಳಿಸಿ, ನೇರವಾಗಿ ಬಸ್ ನಿಲ್ದಾಣದ ಪಾಸ್ ಕೌಂಟರ್‌ನಲ್ಲಿ ಹಣ ಪಾವತಿಸಿ ಪಡೆಯಬಹುದು. (ಈ ಹಿಂದಿನಂತೆ)

ಅಥವಾ

3. ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ತಮ್ಮ ವಿವರಗಳನ್ನು ಭರ್ತಿಗೊಳಿಸಿ, ತದನಂತರ ಭರ್ತಿಗೊಳಿಸಿದ ಅರ್ಜಿಯನ್ನು ಮುದ್ರಣಗೊಳಿಸಿ, ತಾವು ಅಭ್ಯಸಿಸುತ್ತಿರುವ ಶಾಲೆ / ಕಾಲೇಜುಗಳಲ್ಲಿ ನಿಗದಿತ ಫೀ ಸಹಿತ ಸಲ್ಲಿಸುವುದು. ಶಾಲಾ / ಕಾಲೇಜುಗಳಿಂದ ಅರ್ಜಿಗಳನ್ನು ಪರಿಶೀಲಿಸಿ, ಮುದ್ರಿತ ಅರ್ಜಿಗಳ ಮೇಲೆ ಶಾಲಾ / ಕಾಲೇಜು ಮುಖ್ಯಸ್ಥರಿಂದ ಮೇಲು ರುಜುಗೊಳಿಸಿ, ಶಾಲೆ / ಕಾಲೇಜುಗಳ ಮುಖಾಂತರ ಬಸ್‌ಪಾಸ್ ಪಡೆಯುವುದು. (ಈ ಹಿಂದಿನಂತೆ)
4. ವಿದ್ಯಾರ್ಥಿಗಳು ಪಾಸಿನ ಶುಲ್ಕವನ್ನು ಸಂಬಂಧಪಟ್ಟ ಶಾಲಾ / ಕಾಲೇಜಿನಲ್ಲಿ ಅಥವಾ ಕರಾರಸಾ ನಿಗಮದ ಬಸ್ ನಿಲ್ದಾಣದ ಪಾಸ್ ಕೌಂಟರ್‌ಗಳಲ್ಲಿ ಪಾವತಿಸಲು ಅವಕಾಶವಿರುತ್ತದೆ.
5. ಮುಂದುವರೆದು ಸೇವಾಸಿಂಧು Online payment ವ್ಯವಸ್ಥೆ ಸದ್ಯದಲ್ಲಿಯೇ ಜಾರಿಯಾಗಲಿದ್ದು, ವಿವರಗಳನ್ನು ನಂತರ ತಿಳಿಸಲಾಗುವುದು.

### ಬಿ. ಮ್ಯಾನುಯಲ್ ಅರ್ಜಿ ಸ್ವೀಕಾರ :

1. ಮ್ಯಾನ್ಯುಯಲ್ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

## II. ಪಾಸ್ ವಿತರಣಾ ಸಿಬ್ಬಂದಿಯವರ ಕರ್ತವ್ಯಗಳು :

1. ಪಾಸು ವಿತರಣಾ ಸಿಬ್ಬಂದಿಗಳು ಘಟಕ ವ್ಯವಸ್ಥಾಪಕರ ಪರವಾಗಿ ದಾಖಲಾತಿಗಳನ್ನು ಆನ್ ಲೈನ್‌ನಲ್ಲಿ ಪರಿಶೀಲಿಸಿ, ಅರ್ಜಿಗಳನ್ನು ಅನುಮೋದಿಸುವುದು. ಅರ್ಜಿಗೆ ಸಂಬಂಧ ಮಾಹಿತಿಯೂ ಎಸ್.ಎಂ.ಎಸ್ ಮೂಲಕ ವಿದ್ಯಾರ್ಥಿಗಳಿಗೆ ರವಾನೆಗೊಳ್ಳುವ ವ್ಯವಸ್ಥೆ ಇರುತ್ತದೆ.
2. ಅರ್ಜಿ ಸಂಖ್ಯೆ ಆಯ್ಕೆ ಮಾಡಿ view processing history ಮೇಲೆ ಕ್ಲಿಕ್ ಮಾಡಿದಾಗ, ಸಂಪೂರ್ಣ ಅರ್ಜಿಯ ವಿವರ ಮತ್ತು ಅಡಕಗಳನ್ನು ಪರಿಶೀಲಿಸಬಹುದು.
3. ವಿದ್ಯಾರ್ಥಿ ಪಾಸಿನ ಅರ್ಜಿಯ ಬಗ್ಗೆ ಯಾವುದೇ ಸ್ಪಷ್ಟೀಕರಣದ ಅಗತ್ಯವಿದ್ದಲ್ಲಿ, "SEEK CLARIFICATION" ಆಯ್ಕೆ ಮಾಡುವ ಮೂಲಕ ಅರ್ಜಿಯನ್ನು ಆನ್ ಲೈನ್ ಮುಖಾಂತರವೇ

ಹಿಂದಿರುಗಿಸಬಹುದು, ಅರ್ಜಿಯನ್ನು ಒಪ್ಪಿಕೊಂಡ ಅಥವಾ ತಿರಸ್ಕರಿಸಿದ ಬಗ್ಗೆ ಕಾರಣ ತಿಳಿಸಿ Submit ಮೇಲೆ ಕ್ಲಿಕ್ ಮಾಡುವುದು.

4. ಪಾಸು ವಿತರಣೆಗೆ ಸಂಬಂಧಿಸಿದ ಭೌತಿಕ ದಾಖಲಾತಿಗಳನ್ನು ಕಡ್ಡಾಯವಾಗಿ ಪಡೆಯುವುದು.
5. Divisional Controller ಗೆ ಲಾಗಿನ್ ಮಾಡಿ, Message Box ಗೆ ಹೋಗಿ Inbox ನ್ನು ಆಯ್ಕೆ ಮಾಡುವುದು.
6. ಆನ್‌ಲೈನ್ ಅರ್ಜಿಗಳು ಎಲ್ಲಾ ರೀತಿಯಿಂದ ಸಮರ್ಪಕವಾಗಿದ್ದಲ್ಲಿ, Accept option ದಾಖಲಿಸುವುದು ಮತ್ತು ಹಿಂದಿನಂತೆ ಪಾಸು ವಿತರಿಸಲು ಈ ಹಿಂದೆ ಅನುಸರಿಸುತ್ತಿದ್ದ ಕ್ರಮಗಳನ್ನೇ ಅನುಸರಿಸುವುದು.
7. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಜಾತಿ ಪ್ರಮಾಣಪತ್ರ ಸಂಖ್ಯೆಯನ್ನು ನಮೂದಿಸಿರುವುದನ್ನು ಖಚಿತಪಡಿಸಿಕೊಳ್ಳುವುದು, ಮೂಲ ಪ್ರತಿಯನ್ನು ಪರಿಶೀಲಿಸುವುದು ಮತ್ತು ಕಡ್ಡಾಯವಾಗಿ ಜಾತಿ ಪ್ರಮಾಣಪತ್ರದ ನೆರಳಚ್ಚು ಪ್ರತಿಯನ್ನು ಅರ್ಜಿಯೊಂದಿಗೆ (ಡೌನ್ ಲೋಡ್ ಅರ್ಜಿ) ಪಡೆಯುವುದು.
8. ಪ್ರತಿ ವಿಭಾಗದ ಪಾಸು ಶಾಖೆಯವರು ಪಾಸು ವಿತರಣೆಯ ಎಂ.ಐ.ಎಸ್ ವರದಿಗಳನ್ನು ಸಕಾಲದಲ್ಲಿ ಪಡೆದುಕೊಂಡು, ದೃಢೀಕರಿಸಿ ದಾಖಲೆಗಳನ್ನು ನಿರ್ವಹಿಸುವುದು.

## IV. ಗಣಕ ಇಲಾಖೆಯವರ ಕರ್ತವ್ಯಗಳು :

1. ಸೇವಾಸಿಂಧು ಯೋಜನೆಯಡಿ ವಿತರಿಸುವ ವಿದ್ಯಾರ್ಥಿ ಪಾಸುಗಳ ರಿಪೋರ್ಟ್‌ಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಸರ್ಕಾರದೊಂದಿಗೆ ಸಮನ್ವಯಿಸುವುದು.
2. ನೂತನ ವ್ಯವಸ್ಥೆಯನ್ನು ಸುಗಮವಾಗಿ ಜಾರಿಗೆ ತರುವ ಸಂಬಂಧ / ಎಂ.ಐ.ಎಸ್ ವರದಿಗಳ ಸಂಬಂಧ ಅಗತ್ಯ ಕ್ರಮವಹಿಸುವುದು.
3. ವಿಭಾಗಗಳ ಸೇವಾಸಿಂಧು ನೋಡೆಲ್ ಅಧಿಕಾರಿಗಳಿಗೆ ಸೇವಾಸಿಂಧು ಪೋರ್ಟಲ್ ಬಳಕೆ ಸಂಬಂಧ ಅಗತ್ಯ ಮಾಹಿತಿ / ತರಬೇತಿ ನೀಡುವುದು.

## V. ಇತರೆ ಷರತ್ತು ಮತ್ತು ನಿಬಂಧನೆಗಳು :

1. ಪ್ರಸ್ತುತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಹಿಂದಿನಂತೆ ವಿದ್ಯಾರ್ಥಿ ಪಾಸುಗಳನ್ನು 10 / 12 (ಐಟಿಐ) ತಿಂಗಳ ಕಾಲಾವಧಿಗೆ ವಿತರಿಸುವುದು.
2. ಪಾಸು ವಿತರಣೆಯ ವಿವರಗಳನ್ನು ಈ ಹಿಂದಿನ ರೂಢಿಯಂತೆ ಪ್ರತಿ ಮಾಹೆಯಾನ 05 ನೇ ತಾರೀಖಿನೊಳಗೆ ಸಂಚಾರ (ವಾ) ಇಲಾಖೆಗೆ ಕಳುಹಿಸುವುದು.

ಇನ್ನುಳಿದಂತೆ ಈ ಹಿಂದೆ ಹೊರಡಿಸಿರುವ ಇನ್ನಿತರ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶ ಮತ್ತು ಸುತ್ತೋಲೆಗಳಲ್ಲಿ ನೀಡಿರುವ ಇತರೆ ನಿರ್ದೇಶನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸುತ್ತೋಲೆಯನ್ನು ಸ್ವೀಕರಿಸಿ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿಯನ್ನು ಕಳುಹಿಸುವುದು.

(ಶಿವಯೋಗಿ ಸಿ ಕಳಸದ, ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ.ನಿಗಮ.

**ಪ್ರತಿಯನ್ನು:**

1. ವ್ಯವಸ್ಥಾಪಕ ನಿರ್ದೇಶಕರು, ಬೆಂ.ಮ.ಸಾ.ಸಂಸ್ಥೆ / ವಾ.ಕ.ರ.ಸಾ. ಸಂಸ್ಥೆ / ಈ.ಕ.ರ.ಸಾ. ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು/ಹುಬ್ಬಳ್ಳಿ/ಕಲ್ಬುರ್ಗಿರವರ ಮಾಹಿತಿಗಾಗಿ ಕಳುಹಿಸಲಾಗಿದೆ.

1. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು /ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ. ನಿಗಮರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಮುದ್ರಣ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ/ವಾ.ಕ.ರ.ಸಾ.ಸಂಸ್ಥೆ/ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು/ಹುಬ್ಬಳ್ಳಿ/ಕಲಬುರ್ಗಿರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5. ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6. ಹಿರಿಯ / ಆಪ್ತ ಕಾರ್ಯದರ್ಶಿಗಳು, ಅಧ್ಯಕ್ಷರು/ಉಪಾಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಭ&ಜಾ) / (ಸಿ&ಪ) ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.